4) ಯಂಗ್ ಮೆನ್ ರಿಕ್ರಿಯೇಷನ್, ಅಗ್ರಹಾರ, ಎನ್.ಆರ್.ಪುರ.

5) ಮಲ್ನಾಡ್ ರಿಕ್ರಿಯೇಷನ್ ಸೆಂಟರ್, ಜಯಪುರ ಕೊಪ್ಪ ತಾಲ್ಲೂಕು

6) ಟೌನ್ ರಿಕ್ರಿಯೇಷನ್ ಕ್ಲಬ್, ಮುಖ್ಯ ರಸ್ತೆ, ಎನ್.ಆರ್.ಪುರ.

7) ಜಯಪುರ ಗ್ರಾಮಾಂತರ ಮನೋರಂಜನಾ ಕೂಟ, ಜಯಪುರ.

ಕೊಪ್ಪ ತಾಲ್ಲೂಕಿನಲ್ಲಿರುವ 5 ಕ್ಲಬ್‌ಗಳ ಪಟ್ಟಿ

1) ಮಲ್ನಾಡ್ ರಿಕ್ರಿಯೇಷನ್ ಕ್ಲಬ್, ಟಿ.ಎಂ.ರಸ್ತೆ, ಕೊಪ್ಪ.

2) ಆಫೀಸರ್ಸ್ ಕ್ಲಬ್, ಬಾಲಗಡಿ ರಸ್ತೆ, ಕೊಪ್ಪ.

3) ಕೊಪ್ಪ ಪ್ರೆಸ್ ಕ್ಲಬ್, ಬಾಳಗಡಿ ರಸ್ತೆ, ಕೊಪ್ಪ.

4) ಸಹನಾ ರಿಕ್ರಿಯೇಷನ್ ಸೆಂಟರ್, ಎಂ.ಸಿ.ಸಿ.ಬಿಲ್ಡಿಂಗ್, ಕೊಪ್ಪ.

5) ಫ್ರೆಂಡ್ಸ್ ಅಸೋಸಿಯೇಷನ್ ಕ್ಲಬ್, ಸೋನಂ ಕಾಂಪ್ಲೆಕ್ಸ್, ಕೊಪ್ಪ.

3554 (3790) ಶ್ರೀ ಕಟ್ಟಾ ಸುಬುಮಣ್ಯ ನಾಯ್ಡು (ಶಿವಾಜಿನಗರ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಪರಿಷ್ಕೃತ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ 248 ಚದರ ಕಿ.ಮೀ. ಪ್ರದೇಶವನ್ನು ಹಸಿರು ಪಟ್ಟಿ ವಲಯದಿಂದ ಕೈಬಿಡಲು ನಿರ್ಧರಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ;

ಇ) ಹಸಿರು ಪಟ್ಟಿ ವಲಯದಿಂದ ಕೈಬಿಡಲು ನಿರ್ಧರಿಸಿರುವ ಪ್ರದೇಶಗಳನ್ನು ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುವುದು ;

ಈ) ಈ ಪರಿಷ್ಕೃತ ಯೋಜನೆಗೆ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆಯೇ;

ಉ) ಈ ನಿರ್ಧಾರದಿಂದ ಆಗತಕ್ಕ ಪ್ರಯೋಜನಾಧಿಕಾರಿಗಳೇನು ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಯೋಜನಾ ಅವಧಿ, ಜನಸಂಖ್ಯೆಬೆಳವಣಿಗೆ, ಉದ್ಯೋಗಾವಕಾಶ ಕಲ್ಪಿಸುವುದು, ಸಾರ್ವಜನಿಕ ಸೌಲಭ್ಯಗಳು, ಉದ್ಯೋಗ ಕಾರ್ಯಸ್ಥಳಗಳನ್ನು ಒಟ್ಟುಗೂಡಿಸಿ ಮಿಶ್ರಿತ ಬೆಳವಣಿಗೆಗೆ ಉತ್ತೇಜನ ನೀಡುವುದು, ಪರಿಸರ ಕಾಪಾಡುವುದು, ಇತ್ಯಾದಿ ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಂಡು

ಪರಿಷ್ಕೃತ ಕರಡು ಸಮಗ್ರ ಅಭಿವೃದ್ಧಿ ಯೋಜನೆ 2015 ಅನ್ನು ತಯಾರಿಸಲಾಗಿದೆ.

ಆ) ಯೋಜನೆಯನ್ನು 2015 ನೇ ಇಸವಿಗೆ ತಯಾರಿಸಲಾಗಿದ್ದು, 88 ಲಕ್ಷ ಜನಸಂಖ್ಯೆಯನ್ನು ಅಂದಾಜಿಸಲಾಗಿದೆ. 2001 ನೇ ಇಸವಿಗೆ ಜನಗಣತಿಗೆ ಹೋಲಿಸಿದಲ್ಲಿ 26,78,200 ರಷ್ಟು ಈ ಜನಸಂಖ್ಯೆಯು ಹೆಚ್ಚು ಆಗಲಿದ್ದು, ಈ ಜನಸಂಖ್ಯೆಯು 2020 ಗೆ ಇರುವ ಒಂದು ಕೋಟಿತಲುಪುವ ಸಾಧ್ಯತೆಗಳಿವೆ. ಅಲ್ಲದೆ, ನಗರವು ಮುಂದಿನ 15 ವರ್ಷ ಗಳಲ್ಲಿ ಪ್ರಪಂಚದ 20 ಮೆಗಾಸಿಟಿಗಳಲ್ಲಿ ಒಂದಾಗಲಿದ್ದು, ನಗರವು ಪ್ರತಿ ವರ್ಷವೂ ಸುಮಾರು 1.9ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಆಕರ್ಷಿಸುತ್ತಿದೆ. 1995 ರಲ್ಲಿ ಅನುಮೋದಿತ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯಂತೆ 2011 ರವರೆಗೆ 564 ಚ.ಕಿ.ಮೀ. ಪ್ರದೇಶಗಳನ್ನು ನಗರೀಕರಣಕ್ಕೆ ಕಾದಿರಿಸಲಾಗಿತ್ತು. ಆದರೆ, ಈ ಪ್ರದೇಶವು 2003 ನೇ ಇಸವಿಗೆ 565 ಚ.ಕಿ.ಮೀ. ಅಕ್ರಮಿಸಿರುತ್ತದೆ. ಹೀಗಾಗಿ ಹೆಚ್ಚುವರಿ ಜನಸಂಖ್ಯೆಗೆ ಸ್ಥಳಾವಕಾಶ ಕಲ್ಪಿಸಲು ಮತ್ತು ಅಭಿವೃದ್ಧಿಗಾಗಿ ನಗರೀಕರಣ ವ್ಯಾಪ್ತಿಯನ್ನು ವಿಸ್ತರಿಸಲೇಬೇಕಾದ ಅನಿವಾರ್ಯ ಉಂಟಾಗಿದ್ದು 786 ಚ.ಕಿ.ಮೀ. ಪ್ರದೇಶವನ್ನು ನಗರೀಕರಣಕ್ಕೆ ನಿಗಧಿ ಪಡಿಸಲಾಗಿರುತ್ತದೆ. ಈ ನಗರೀಕರಣ ವ್ಯಾಪ್ತಿಯಲ್ಲಿ ಸುಮಾರು 11.5 ಚ.ಕಿ.ಮೀ. ಪ್ರದೇಶಗಳನ್ನು ಕಣಿವೆಗಾಗಿ ಸಹ ಕಾದಿರಿಸಲಾಗಿರುತ್ತದೆ. ತತ್ಪರಿಣಾಮವಾಗಿ ಹಾಲಿಯಿರುವ ಹಸಿರು ಪಟ್ಟಿಯಲ್ಲಿ 221 ಚ,ಕಿ,ಮೀ. ಪ್ರದೇಶವನ್ನು ಕೈಬಿಡಲು ಕರಡು ಯೋಜನೆಯನ್ನು ಪ್ರಸ್ತಾಪಿಸಲಾಗಿದೆ.

ಈ) ಸಾರ್ವಜನಿಕರಿಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸ ಲಾಗುವುದು.

ಉ) ಜನಸಂಖ್ಯೆಗೆ ಅನುಗುಣವಾಗಿ ಬೆಳವಣಿಗೆಗೆ ಅಗತ್ಯವಾದ ಪ್ರದೇಶಗಳನ್ನು ಪೂರೈಸುವುದೇ ಅಲ್ಲದೇ ಬೆಳವಣಿಗೆಯನ್ನು ನಿಯಂತ್ರಣದಲ್ಲಿ ಇಡಬಹುದಾಗಿದೆ. ಇದರಿಂದಾಗಿ ಉದ್ದೇಶಿತ ಬೆಳವಣಿಗೆಗಳು ಯೋಜನಾ ಬದ್ಧವಾಗಿ ಬೆಳವಣಿಗೆ ಹೊಂದಲಿದ್ದು, ಸಾರ್ವಜನಿಕರಿಗೆ ಅಗತ್ಯವಾದ ಸಾರ್ವಜನಿಕ ಸೌಲಭ್ಯಗಳನ್ನು ಪೂರೈಸಲು ಸಹಕಾರಿಯಾಗಲಿದೆ.